ಕರ್ನಾಟಕ ಸರ್ಕಾರ

ಕೈಮಗ್ಗ ಮತ್ತು ಜವಳಿ ಇಲಾಖೆ

ವಿಷಯ:- ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ಎಕ್ಸ್‌ಪ್ರೆಸ್ ಫೀಡರ್ ಉಪ ಯೋಜನೆಯ ಮಾರ್ಗಸೂಚಿ ಕುರಿತು.

* * * * *

2012-13ನೇ ಸಾಲಿನ ಅಯವ್ಯಯದಲ್ಲಿ ನೇಕಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಮತ್ತು ಅವರ ವರಮಾನ ಮಟ್ಟವನ್ನು ಹೆಚ್ಚಿಸಲು ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇದರಲ್ಲಿ ಎಕ್ಸ್‌ಪ್ರೆಸ್ ಫೀಡರ್ ಯೋಜನೆಯೂ ಸಹ ಒಳಗೊಂಡಿರುತ್ತದೆ. ವಿದ್ಯುತ್ ಮಗ್ಗ ನೇಕಾರರಿಗೆ ಉತ್ಪಾದನಾ ಚಟುವಟಿಕೆಗೆ ನಿರಂತರ ವಿದ್ಯುತ್ ಒದಗಿಸಿ ಅವರ ಅಭಿವೃದ್ಧಿಗೆ ಕಾಲಬದ್ಧವಾಗಿ ಕಾರ್ಯಕ್ರಮವನ್ನು ಜಾರಿಗೊಳಿಸಲು, ಹಾಗೂ ಯೋಜನೆಯಡಿ ಅನುದಾನ ಬಿಡುಗಡೆ ಮಾಡಲು ಅನುಸರಿಸಬೇಕಾದ ಕಾರ್ಯವಿಧಾನಗಳಿಗೆ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯದಲ್ಲಿರುವ ಮತ್ತು ನಿಯಮಾನುಸಾರ ನೋಂದಾಯಿತ ವಿದ್ಯುತ್ ಮಗ್ಗ ನೇಕಾರರ ಸಹಕಾರ ಸಂಘ, ವಿವಿದ್ದೋದ್ದೇಶಗಳ ಸಹಕಾರ ಸಂಘ, ಸ್ವಯಂ ಸೇವಾ ಸಹಕಾರ ಸಂಘ, ಮಹಿಳಾ ಸೇವಾ ಸಹಕಾರ ಸಂಘ ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳ ಮೂಲಕ ವಿದ್ಯುತ್ ಮಗ್ಗ ನೇಕಾರರ ಸಾಂದ್ರತೆ ಇರುವ ಪ್ರದೇಶಗಳಲ್ಲಿ, ನೇಕಾರರ ಕಾಲೋನಿಯಲ್ಲಿ ಯೋಜನೆಯನ್ನು ಅಭಿವೃದ್ಧಿ ಪಡಿಸುವುದು.

ಜಿಲ್ಲಾ ಮಟ್ಟದ ಅಧಿಕಾರಿಗಳು ನಿಯಮಾನುಸಾರ ನೇಕಾರರ ಸಾಂದ್ರತೆ ಇರುವ ಪ್ರದೇಶದ ಫಲಾನುಭವಿಗಳನ್ನು ಆಯ್ಕೆ ಮಾಡಿ ಮಾರ್ಗಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ದಾಖಲಾತಿಗಳನ್ನು ಪಡೆದು ಪ್ರತ್ಯೇಕವಾಗಿ ಫಲಾನುಭವಿಯ ವಿವರಗಳೊಂದಿಗೆ ಅರ್ಹತೆಯನ್ನು ದೃಡೀಕರಿಸಿ ಹಾಗೂ ಸ್ಥಳೀಯ ವಿದ್ಯುತ್ ಸರಬರಾಜು ಕಂಪನಿಯಿಂದ ಎಕ್ಸ್‌ಪ್ರೆಸ್ ಫೀಡರ್ ಅಳವಡಿಸಲು ಬೇಕಾಗುವ ಅಂದಾಜು ವೆಚ್ಚದ ಪಟ್ಟಿ ಹಾಗೂ ನೀಲಿ ನಕ್ಷೆಯನ್ನು ಮಂಜೂರಾತಿಗೆ ಕೇಂದ್ರ ಕಛೇರಿಗೆ ಶಿಫಾರಸ್ಸು ಮಾಡುವುದು.

**ಅರ್ಹತೆ :**

1) ವಿದ್ಯುತ್ ಮಗ್ಗ ನೇಯ್ಗೆ ಚಟುವಟಿಕೆಯಲ್ಲಿ ತೊಡಗಿರುವ ಪ್ರದೇಶವಾಗಿರಬೇಕು.

2) ಕನಿಷ್ಠ 50 ವಿದ್ಯುತ್ ಮಗ್ಗಗಳು ಇರುವ ಪ್ರದೇಶವಾಗಿರಬೇಕು.

3) ಅಸಂಘಟಿತ ವಲಯ, ಸಹಕಾರ ಸಂಘ / ಸಂಸ್ಥೆಗಳಲ್ಲಿ ನೊಂದಾಯಿತ ಹಾಗೂ ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿರುವ ನೇಕಾರರು ಮತ್ತು ಸಂಘಟಿತ ವಲಯದ ಫಲಾನುಭವಿಗಳು.

**ಪ್ರಸ್ತಾವನೆಗೆ ದಾಖಲಾತಿಗಳು:**

1) ನಮೂನೆಯಲ್ಲಿ ನೇಕಾರರ ಮಾಹಿತಿ.

2) ವಿದ್ಯುತ್‌ಮಗ್ಗ ಘಟಕಗಳ ವಿವರ

~~3) ವಿದ್ಯುತ್ ಸಂಪರ್ಕ ಹೊಂದಿರುವ ದಾಖಲಾತಿ~~

4) ವಿದ್ಯುತ್ ಸರಬರಾಜು ಕಂಪನಿಯಿಂದ ಪಡೆದಿರುವ ಅನುಮೋದಿತ ಅಂದಾಜು ವೆಚ್ಚಪಟ್ಟಿ ಮತ್ತು ನೀಲಿ ನಕ್ಷೆ.

**ಅನುಷ್ಠಾನ:**

1) ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾಮಟ್ಟದ ಉಪ ನಿರ್ದೇಶಕರು / ಸಹಾಯಕ ನಿರ್ದೇಶಕರು ವಿದ್ಯುತ್ ಮಗ್ಗ ನೇಕಾರರ ಸಾಂದ್ರತೆ ಇರುವ ಪ್ರದೇಶಗಳನ್ನು ಗುರುತಿಸಿ ಯೋಜನೆ ಅನುಷ್ಠಾನಗೊಳಿಸುವುದು.
2) ಫಲಾನುಭವಿಗಳ ಮಾಹಿತಿ ಹಾಗೂ ವಿದ್ಯುತ್ ಸರಬರಾಜು ಕಂಪನಿಯಿಂದ ಪಡೆದಿರುವ ಅನುಮೋದಿತ ಅಂದಾಜು ವೆಚ್ಚಪಟ್ಟಿ ಮತ್ತು ನೀಲಿ ನಕ್ಷೆಯೊಂದಿಗೆ ಕೇಂದ್ರ ಕಛೇರಿಗೆ ಸೂಕ್ತ ಶಿಫಾರಸ್ಸು ಮಾಡುವುದು.
3) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಂತೆ ಅನುಷ್ಠಾನಗೊಳಿಸುವುದು.
4) ಯೋಜನೆ ಅನುಷ್ಠಾನದ ನಂತರ ಬಿಡುಗಡೆ ಮಾಡಲಾದ ಸಂಪೂರ್ಣ ಮೊತ್ತಕ್ಕೆ ಹಣಬಳಕೆ ಪ್ರಮಾಣಪತ್ರ ಸಲ್ಲಿಸುವುದು.

**ಹಣಬಿಡುಗಡೆ:**

1) ಕಾಮಗಾರಿಯ ಪ್ರಗತಿಯನ್ನಾಧರಿಸಿ ಎರಡು ಹಂತಗಳಲ್ಲಿ ನಿಯಮಾನುಸಾರ ಅಧಿಕೃತ ಗುತ್ತಿಗೆದಾರರಿಗೆ ಹಣಬಿಡುಗಡೆ ಮಾಡುವುದು.

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ
ನಿರ್ದೇಶಕರು, ಕೈಮಗ್ಗ ಮತ್ತು ಜವಳಿ.